Sri J. P. SARWESH.—Will the Government assure the house that the village accountants posted will not be posted in their own villages ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಜಿಲ್ಲಾಧಿಕಾರಿಗಳು ಅವರನ್ನು ನೇಮಕ ಮಾಡುವಾಗ ಸಾಧ್ಯವಾದಷ್ಟು ಅವರ ಸ್ವಗ್ರಾಮಗಳಿಗೆ ನೇಮಕ ಮಾಡಬಾರದು ಎಂದು ಏನೂ ಇಲ್ಲ. ಆದರೂ ಕೂಡ ಕೆಲವು ಕಡೆಗಳಲ್ಲಿ ಸ್ವಗ್ರಾಮಗಳಿಗೆ ಹಾಕುವದು ಸೂಕ್ತವೆಂದು ಹೇಳುತ್ತಾರೆ; ಮತ್ತು ಕೆಲವು ಕಡೆಗಳಲ್ಲಿ ಸ್ವಗ್ರಾಮಗಳಿಗೆ ಹಾಕಿದರೆ ಅಲ್ಲಿ ಅವರು ರಾಜಕೀಯ ಮಾಡುತ್ತಾರೆ ಎಂದು ಹೇಳುವ ಮಾತೂ ಇದೆ.

ಶ್ರೀ ಬಿ. ಜಿ. ಬಣಕಾರ್.—ಈ ಒಂದು ಪಂಚಾಯತ್ ಕ್ಷೇತ್ರದಲ್ಲಿ ಮೂರು ನಾಲ್ಕು ಶ್ಯಾನುಭೋಗರು, ತಲಾಟಿಗಳು ಕೆಲಸ ಮಾಡತಕ್ಕಂಥಹ ಸಂದರ್ಭ ಇದೆ. ಆದ್ದರಿಂದ ಪಂಚಾಯತುಗಳಲ್ಲಿ ಒಂದು ಸಮನ್ವಯ ರೀತಿಯ ಆಡಳಿತ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದೊಂದು ಪಂಚಾಯತಿಗಳಲ್ಲಿ ಒಂದೇ ತಲಾಟಿ ಇರುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡೋಣ.

MADAM SPEAKER.—Question No. 18 will be taken on some other day.

Amrit Mahal Kavals in the State

202. Sri B. BYRAPPAJI (Turuvekere).—

Will the Minister of State for Animal Husbandry be pleased to state :—

(*a*) the names of taluks in the State where there are Amrit Mahal Kavals ;

(*b*) the extent of the Kavals ;

(*c*) whether it is a fact that Government have decided to grant compensation to the native officers in charge of rearing cattle in those Kavals in terms of land and surrender the remaining lands to Revenue Department ;

(*d*) if so, the reason for not implementing the same ?

Sri N. CHIKKE GOWDA (Minister of State for Animal Husbandry).—

(*a*) and (*b*) The names of taluks where there are Amrit Mahal Kavals and their extent is given in the statement appended.

(*c*) No.

(*d*) Does not arise.

(SRI N. CHIKKE GOWDA)

STATEMENT

Showing the names of Amrithmahal Kavals with their extent.

Sl. No.	Name of the Kaval	Taluk	District	Extent of land
1	2	3	4	5
				Acres *Guntas*
1	Ulvarthy ...	Challakere	Chitradurga	2,000.00
2	Varavoo ...	do	do	2,000.00
3	Parashuramapura ...	do	do	1,000.00
4	Hirekere ...	do	do	1,500.00
5	Khudapura ...	do	do	2,817.17
6	Gowdasamudra ...	do	do	1,233.00
7	Rekhalagere ...	do	do	1,000.00
8	Kadurgudda ...	Holalkere	do	1,906.37
9	Rangavyanadurga ...	do	do	1,868.00
10	Arehalli ...	do	do	262.00
11	Harogitti ...	do	do	1,010.00
12	Gunderi ...	do	do	930.00
13	Chikka-Yemmiganur ...	do	do	1,070.00
14	Ramagiri ...	do	do	2,576.21
15	Devapura ...	Hosadurga	do	520.00
16	Ballalasamudara ...	do	do	1,236.04
17	Kynodu (including Chikkathekalamatti Sommasandra).	do	do	1,017.00
18	Neergunda ...	do	do	1,235.22
19	Kyadigere ...	do	do	1,329.14
20	Yeradugudda ...	do	do	583.23
21	Kongavallithore ...	do	do	789.29
22	Yagtithore ...	Kadur	Chickmagalur	1,000.00
23	Devanur ...	do	do	98.18
24	Birur ...	do	do	911.28

1	2	3	4	5
				Acres Guntas
25	Yemmedoddi ...	Kadur	Chickmagalur	3,912.27
26	Madagadakere (Yemmedoddi).	do	do	4,800.00
27	Iyyanakere ...	do	do	2,760.00
28	Basur ...	do	do	1,009.38
29	Hirenallur ...	do	do	154.23
30	Bilwala ...	do	do	1,259.39
31	Lingadahalli ...	Tarikere	do	446.12
32	Parvatharayanakere ...	do	do	651.11
33	Baggavalli ..	do	do	478.32
34	Savemaradi ...	do	do	1,164.00
35	Santhedibba ...	do	do	443.33
36	Habbanaghatta ...	Arasikere	Hassan	794.36
37	Belagumba ...	do	do	600.00
38	Boochenahalli ...	do	do	790.00
39	Boochenahalli ...	Chickmagalur	Chickmagalur	1,398.00
40	Manjenahalli ...	Arasikere	Hassan	300.00
41	Kanakatte ...	do	do	450.00
42	Koravangala ...	do	do	650.00
43	Rangapur ...	Hassan	do	1,520.00
44	Thirumaladevaragudda	do	do	1,000.00
45	Aanchihallimane ...	do	do	294.27
46	Kurikaval ...	Channaraya-patna	do	600.00
47	Rayasandra ...	do	do	1,406.34
48	Yerebore ...	do	do	1,103.00
49	Bidare ...	do	do	1,010.00
50	Choudasandra ...	Holenarasipur	do	795.13
51	Lakkihalli ...	Tiptur	Tumkur	410.19
52	Bidrammanagudi ...	do	do	800.00
53	Bajagur ...	do	do	262.00
54	Horamani (Dunda) ...	Turuvekere	do	228.33
55	Kunikenahalli ...	do	do	571.07
56	Sarigehalli	do	do	57.29
57	Bidrehalla ...	Gubbi	do	682.12
58	Halumaladevara Hadlu	do	do	857.18
59	Dadga ...	Nagamangala	Mandya	268.00
60	Kelegere ...	do	do	91.26
61	Shanthisagar ...	Channagiri	Shimoga	3,000.00

(SRI N. CHIKKE GOWDA)

ABSTRACT

			Acres *Guntas*
1	Chitradurga	...	26,885·07
2	Chickmagalur	...	20,489·21
3	Hassan	...	11,313·70
4	Tumkur	...	3,869·38
5	Mandya	...	3,359·26
	Grand Total	...	65,916·62

ಶ್ರೀ ಬಿ. ಬೈರಪ್ಪಾಜಿ.—(ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಹಿಂದಿನ ಸರ್ಕಾರ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದು ಅವರಿಗೆ ಪರಿಹಾರ ಕೊಟ್ಟು ಉಳಿದ ಜಮೀನನ್ನು ಕಂದಾಯ ಶಾಖೆಗೆ ವಹಿಸಿ ಜಮೀನು ಇಲ್ಲದವರಿಗೆ ಅದನ್ನು ಹಂಚುವ ವ್ಯವಸ್ಥೆಮಾಡ ಬೇಕೆಂದು ತೀರ್ಮಾನವಾಗಿದ್ದುದರಿಂದ ಆ ವಿಚಾರದಲ್ಲಿ ಸರ್ಕಾರದವರು ಏನು ಕ್ರಮ ತೆಗೆದು ಕೊಂಡಿದ್ದಾರೆ ?

† ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಹಿಂದಿನ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. ಆಗಿನ ಪಶುಪಾಲನೆಯ ಮಂತ್ರಿಗಳೂ ಸಹ ಅಮೃತಮಹಲ್ ಕಾವಲನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸಿ ಜಮೀನು ಇಲ್ಲದಿರುವವರಿಗೆ ಹೆಚ್ಚು ಹೆಚ್ಚಾಗಿ ಕೊಡಬೇಕೆಂದು ತೀರ್ಮಾನವನ್ನು ಸಹ ಕೈಗೊಂಡಿದ್ದಾರೆ. ಆದರೆ ಈ ಸರ್ಕಾರ ಬಂದ ನಂತರ ಇವತ್ತು ಇರತಕ್ಕ ಜಮೀನನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೆಂದು ತೀವ್ರವಾಗಿ ಯೋಚನೆಮಾಡುತ್ತಿದೆ. ಇವತ್ತಿನವರೆಗೂ ನಮಗೆ ಹೆಚ್ಚು ಹಾಲು ಕೊಡುವ ಮಿಶ್ರತಳಿಯನ್ನು ಬೆಳೆಸಲು ಈ ಕಾವಲುಗಳನ್ನು ಸಣ್ಣ ಹಿಡುವಳಿದಾರರಿಗೆ ಒಂದು ನಿಗದಿಯಾದಂಥ ಬೆಲೆಗೆ ಕೊಡ ಬೇಕೆಂಬ ವಿಷಯವನ್ನು ಸರ್ಕಾರ ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರಬೇಕೆಂದಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಕೆಲವರಿಂದ ತಾವು ಕಾವಲನ್ನು ವಾಪಸು ಪಡೆದು ಹರಾಜು ಮೂಲಕ ಬೇರೆಯವರಿಗೆ ಹುಲ್ಲುಗಾವಲುಗಳಿಗೋಸ್ಕರ ಕೊಟ್ಟಿದ್ದೀರಿ. ಇನ್ನು ಕೆಲವರಿಗೆ ಅವರವರ ವಶ ದಲ್ಲಿಯೇ ಬಿಟ್ಟಿದ್ದೀರಿ. ಇದರಿಂದ ತಾರತಮ್ಯ ಉಂಟಾಗಿ ಕೆಲವು ಸೇರ್ವೆಗಾರರು ಪರಿಹಾರವನ್ನು ಜಮೀನು ರೂಪದಲ್ಲಿ ಮಾತ್ರ ಪಡೆಯುತ್ತಿದ್ದಾರಲ್ಲವೇ ?

ಯಾರಿಗೆ ಹರಾಜು ಮೂಲಕ ಈ ಕಾವಲಿನಲ್ಲಿ ದನಗಳನ್ನು ಮೇಯಿಸುವ ಹಕ್ಕನ್ನು ಕೊಟ್ಟಿದ್ದೀರೋ ಅಂತಹವರಿಗೆ ಅಲ್ಲಿ ಸಾಗುವಳಿ ಮಾಡಲು ಅವಕಾಶವಿಲ್ಲ, ನಿಲ್ಲಿಸಿದ್ದೇವೆಂದು ಹೇಳುತ್ತೀರಿ. ಅದನ್ನು ಮುಂದೆ ಕೊಡಲು ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಈ ಅಮೃತಮಹಲ್ ಕಾವಲ್ ಜಮೀನನ್ನು ವ್ಯವಸಾಯಗಾರರಿಗೆ ಕೊಡುವ ಯೋಚನೆಯನ್ನು ಮಾಡಿದ್ದೀರಾ ?

ಶ್ರೀ ಎನ್. ಚಿಕ್ಕೇಗೌಡ.—ಈಗ ಸದ್ಯಕ್ಕೆ ಆ ಯೋಚನೆ ನಮ್ಮಲ್ಲಿಲ್ಲ.

ಶ್ರೀ ಬಿ ಬೈರಪ್ಪಾಜಿ.—ಕೆಲವು ಜನರು ಕಾವಲುಗಳನ್ನು ವಾಪಸು ಪಡೆದ ನಂತರ ಈ ಕಾವಲುಗಳನ್ನು, ತಮ್ಮ ರಾಸುಗಳನ್ನೂ ಮತ್ತು ಮನೆಗಳನ್ನೂ ಮಾರಿಕೊಂಡು ಜಮೀನು ಇಲ್ಲದೆ ಮತ್ತು ಯಾವ ಒಂದು ಪರಿಹಾರವೂ ಇಲ್ಲದೆ ತುಂಬಾ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

ಆದ್ದರಿಂದ ಅಂತಹವರಿಗೆ ಜಮೀನು ಮತ್ತೆ ಕೊಟ್ಟು ತಳಿಗಳನ್ನು ಅಭಿವೃದ್ಧಿಪಡಿಸುವುದು ಒಂದು ವಿಧದಲ್ಲಿ ಸ್ವಾಗತಾರ್ಹವಾದುದು. ಆದ್ದರಿಂದ ಜಮೀನನ್ನು ಮತ್ತೆ ವಾಪಸ್ಸು ಪಡೆದಿರುವವರಿಗೆ ಅದರಲ್ಲಿಯೂ ದನಗಳನ್ನು ಕಳೆದುಕೊಂಡಿರುವವರಿಗೆ ಜಮೀನು ರೂಪದಲ್ಲಿ ಏನಾದರೂ ಪರಿಹಾರ ಕೊಡುವ ವ್ಯವಸ್ಥೆಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಈಗ ಅಮೃತಮಹಲ್ ಕಾವಲು 65,916 ಎಕರೆಯಷ್ಟು ಕೊಟ್ಟಿದೆ. ಕೆಲವು ಸೇರ್ವೆಗಾರರು ಅಲ್ಲಿ ದನಗಳನ್ನು ಸಾಕುವುದಕ್ಕೆ ಆ ಜಮೀನು ಕೊಟ್ಟಿದ್ದು ನಿಜ. ನಂತರ ಪುನರಾಲೋಚನೆ ಮಾಡಿ ಅದನ್ನು ಕೊಡಬೇಕಾಗಿಲ್ಲವೆಂದು ತೀರ್ಮಾನ ತೆಗೆದುಕೊಂಡಿದೆ. ಅವರು ಎಲ್ಲರಂತೆ ಜಮೀನು ಇಲ್ಲದೇ ಇರುವವರಾಗಿದ್ದರೆ, ಅಂತಹವರಿಗೆ ಸ್ಪೆಷಲ್ಲಾಗಿ ಪುನಃ ಕೊಡುವ ಅಗತ್ಯ ಸರ್ಕಾರಕ್ಕೆ ಇಲ್ಲ. ಅದನ್ನು ಜಮೀನು ಇಲ್ಲದೇ ಇರುವವರಿಗೆ ಮಾತ್ರ ಹಂಚಬೇಕೇ ಎನ್ನುವುದನ್ನು ಯೋಚನೆಮಾಡುತ್ತಿದ್ದೇವೆ. ಎಲ್ಲವನ್ನೂ ಹಂಚುವುದಕ್ಕಾಗುವುದಿಲ್ಲ. ಈಗ ವ್ಯವಸಾಯಗಾರರು ಹೆಚ್ಚು ಜನರಿದ್ದಾರೆ. ಅವರ ದೃಷ್ಟಿಯಿಂದಲೂ ಅವರ ದನಗಳ ಸಾಗಾಣಿಕೆಯ ಅಭಿವೃದ್ಧಿ ದೃಷ್ಟಿಯಿಂದಲೂ ಕೆಲವು ಕಾವಲುಗಳನ್ನು ಹಾಗೆಯೇ ಇಟ್ಟುಕೊಳ್ಳುವುದು ಸೂಕ್ತವಿದೆ. ಇತ್ತೀಚೆಗೆ ಕೇಂದ್ರ ಸರ್ಕಾರದಿಂದ ಕೆಲವು ಸ್ಕೀಮುಗಳು ಬಂದಿವೆ. ನಾವು ಉತ್ಪಾದನೆಯಾದಂಥ ತಳಿಯ ಅಭಿವೃದ್ಧಿಗಾಗಿ ಹೆಚ್ಚು ಹುಲ್ಲನ್ನೂ ಬೆಳೆಸುವುದನ್ನೂ ಸಹ ಪರಿಶೀಲನೆಮಾಡಬೇಕಾಗಿದೆ. ಇಡೀ ದೇಶಾದ್ಯಂತ ಇರತಕ್ಕ ಗೊಮಾಳವೆಲ್ಲಾ ಮತ್ತು ದನಗಳಿಗೆ ಇಟ್ಟಿದ್ದಂಥ ಭಾಗವನ್ನೆಲ್ಲಾ ವ್ಯವಸಾಯಕ್ಕೇ ಕೊಡುತ್ತಿದ್ದೇವೆ. ಗೋಮಾಳ ಇನ್ನು ಸ್ವಲ್ಪಕಾಲದಲ್ಲಿ ಹೆಚ್ಚಿಗೆ ಉಳಿಯುವುದಿಲ್ಲ. ಏಕೆಂದರೆ ವ್ಯವಸಾಯಮಾಡುವ ಜನರ ಒತ್ತಡ ಜಾಸ್ತಿ ಇರುವಾಗ ಅದನ್ನು ಕೊಟ್ಟಮೇರೆ ವ್ಯವಸಾಯಗಾರರಿಗೆ ತಮ್ಮ ಜಮೀನಾಗಳಲ್ಲಿ ಮೇವುಗಳನ್ನು ಬೆಳೆಯತಕ್ಕ ಅಗತ್ಯ ಹೆಚ್ಚಿಗೆ ಬರುತ್ತದೆ. ಹಾಗೆ ಬರಬೇಕಾದರೆ ನಮ್ಮ ದೇಶದಲ್ಲಿ ಫಾಡರ್ ಅಂದರೆ ದನಗಳ ಮೇವಿನ ಸಮಸ್ಯೆ ಬರುತ್ತದೆ. ಅದಕ್ಕೆ ಶಾಸ್ತ್ರೀಯವಾಗಿ ಶಾಶ್ವತವಾಗಿ ಮಾಡಬೇಕಾದಂಥ ಕೆಲಸ ಬಹಳವಾಗಿದೆ. ಈಗ ನಮಗೆ ಇರತಕ್ಕ 3—4 ಸಾವಿರ ಎಕರೆ ಜಮೀನನ್ನು ಗೋಮಾಳ ಪ್ರದೇಶವಾಗಿ ಇಟ್ಟುಕೊಂಡಿರುವುದನ್ನು ನಾವು ಹಾಗೆಯೇ ಇಟ್ಟುಕೊಳ್ಳುವುದು ಯೋಗ್ಯ. ಈಗ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ 3—4 ಸಾವಿರ ಎಕರೆಯಷ್ಟು ಗೋಮಾಳವಿರುವುದರಿಂದ ಕುರಿಗಳ ಪೋಷಣೆ ಹಾಗೂ ಅವುಗಳ ಅಭಿವೃದ್ಧಿ ಬಗ್ಗೆ ರಿಸರ್ಚ್ ಸ್ಟೇಷನ್ ಸಹ ಪ್ರಾರಂಭವಾಗಿದೆ. ಈ ವಿಚಾರದಲ್ಲಿ ಆಸ್ಟ್ರೇಲಿಯಾದವರು ನಮಗೆ ಸಹಾಯಮಾಡುತ್ತೇವೆಂದು ಮುಂದಾಗಿ ಬಂದಿರುವುದರಿಂದ, ಅದು ಒಂದು ನಮಗೆ ಅನುಕೂಲವಾಗುತ್ತದೆ. ಅದು ಹೊಸದಾಗಿ ಬಂದಿದೆ. ಹೀಗೆಯೇ ಈಗಾಗಲೇ ನಾವು ದೊಡ್ಡದಾದಂಥ ಭಾಗಗಳಿರುವುದನ್ನೆಲ್ಲಾ ಸುಮಾರು 2—3 ಲಕ್ಷ ಎಕರೆವರೆಗೂ ಕೊಟ್ಟಿದ್ದು ಆಗಿದೆ. ಆದರೆ ಹೀಗೆ ಎಲ್ಲವನ್ನೂ ಕೊಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆಂದು ನಾನು ಹಿಂದೆಯೇ ಹೇಳಿದ್ದೇನೆ. ಯಾವುದಾದರೂ ಶಾಸ್ತ್ರೀಯವಾಗಿ ಒಂದು ಶಾಶ್ವತವಾದ ಕೆಲಸವನ್ನು ಈ ವಿಚಾರದಲ್ಲಿ ಮಾಡಬೇಕೆಂದು ಹೋಗುವಾಗ ಕೆಲವರು ಭೂಮಿ ಇಲ್ಲದೆ ಹೋಗುತ್ತಾರೆ. ಆದ್ದರಿಂದ ಕೆಲವು ಭಾಗಗಳನ್ನು ಸರ್ಕಾರದವರು ರಕ್ಷಣೆ ಮಾಡಬೇಕಾಗುತ್ತದೆ. ವಿಧಿಯಿಲ್ಲ, ಒಂದುವೇಳೆ ಏನಾದರೂ ಕೊಟ್ಟರೂ ಸಹ ಇರತಕ್ಕ ಭೂಮಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ನೂರಾರು ವರ್ಷಗಳಿಂದ ಅವನ್ನು ಅವಲಂಬಿಸಿ ಮಾಡಿಕೊಂಡು ಬಂದಿರತಕ್ಕ ಕಾವಲುಗಾರರು ಅಥವಾ ಸೇರ್ವೆಗಾರರು ಇದ್ದರೆ ಅವರಿಗೆ ಪರಿಹಾರ ಕೊಡುವುದು ಸೂಕ್ತವೆಂದು ನಾನು ಹೇಳುತ್ತೇನೆ. ಆ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಕೆಲವು ಸೇರ್ವೆಗಾರರಿಗೆ 10 ಎಕರೆಗಳನ್ನು ಕೊಟ್ಟಿದ್ದೇವೆ. ನೂರಾರು ವರ್ಷಗಳಿಂದ ಸುಮಾರು 200 ಎಕರೆಯವರೆಗೆ ತಾವೇ ಅವಲಂಬಿಸಿಕೊಂಡು ಗತ್ತಿಗೆಗೆ ತೆಗೆದುಕೊಂಡಿರುವವರೂ ಇದ್ದಾರೆ. ಅದನ್ನು ನೋಡಿ, ಜಮೀನು ಇಲ್ಲದೇ ಇರುವವರು, ನಮ್ಮ ಕಾವಲುಗಳನ್ನು ತುಂಬಾ ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ. ಅಂತಹವರು ಸರ್ಕಾರಕ್ಕೆ ಬಹಳ ವಿಧೇಯರಾಗಿದ್ದವರು. ಅಂತವರು ಅದನ್ನು ಅನುವಂಶೀಯವಾಗಿ ನೋಡಿಕೊಂಡು ಬಂದಿದ್ದಾರೆ. ಅವರು ಸರ್ಕಾರಕ್ಕೆ ಇಷ್ಟು ಸಪೋರ್ಟ್ ಮಾಡಿರುವುದರಿಂದಲೂ ಮತ್ತು ಅದಕ್ಕೆ ಒಂದು ಸೀಲಿಂಗ್ ಈಗಾಗಲೇ ಬಂದಿರುವುದರಿಂದಲೂ ಅವರಿಗೆ ಶಿಕ್ಷಾರ್ಹತೆ ಅದನ್ನು ಕೊಡುವುದಕ್ಕಾಗುವುದಿಲ್ಲ. ಒಂದುವೇಳೆ ಅವರು ತುಂಬಾ ಬಡವರು ಇದ್ದರೆ ಅಂತಹವರಿಗೆ ನಾಲ್ಕಾರು ಎಕರೆಯಷ್ಟು ಈ ಕಾವಲನ್ನು ಕೊಡಬಹುದು. ಅದೂ ಕೂಡ ಒಂದು ಮೆಹರ್‌ಬಾನಿಗಾಗಿ. ಆದರೆ ಈಗ ಅಂತಹವರಿಗೆ 50 ಅಥವಾ 100 ಎಕರೆಗಳನ್ನು ಕೊಡಿ ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ.